**ಸಾಕ್ಷಿಯನ್ನು ದಿಃ 26.02.2024 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

## ಪಾಟೀ ಸವಾಲುಃ ಶ್ರೀ.ಜೆ.ಪಿ ವಕೀಲರಿಂದಃ

ನಾನು 8 ನೇ ತರಗತಿ ಓದಿರುತ್ತೇನೆ. ದಾವಾ ನಿವೇಶನವನ್ನು ನಾನು ಮುನಿಸೊಣ್ಣಪ್ಪ ರವರಿಂದ ಖರೀಧಿಸಿರುತ್ತೇನೆ. ಪೂರ್ವ-ಪಶ್ಚಿಮ 30 ಅಡಿ , ಉತ್ತರ ದಕ್ಷಿಣ 40 ಅಡಿ ನಿವೇಶನವನ್ನು ನಾನು ಖರೀಧಿಸಿರುತ್ತೇನೆ. ಸದರಿ ಸ್ವತ್ತು ಅವರಿಗೆ ಸರ್ಕಾರದಿಂದ ಮಂಜೂರು ಆಗಿತ್ತು. ಸರ್ವೆ.ನಂ.11 ರಲ್ಲಿ ದಾವಾ ನಿವೇಶನ ಬರುತ್ತದೆ. ನಮ್ಮ ನಿವೇಶನದ ಸಂಖ್ಯೆ 124 ಆಗಿರುತ್ತದೆ. ದಾವಾ ನಿವೇಶನದ ಚೆಕ್ಕುಬಂದಿ ಪೂರ್ವಕ್ಕೆ ಸೈಟ್ ನಂ. 125, ಪಶ್ಚಿಮಕ್ಕೆ ಸರ್ವೆ ನಂಬರ್ ಜಮೀನು , ಉತ್ತರಕ್ಕೆ 20 ಅಡಿ ರಸ್ತೆ ಮತ್ತು ದಕ್ಷಿಣಕ್ಕೆ ಸೈಟ್ ನಂ.126 ಅದರಲ್ಲಿ ಪ್ರತಿವಾದಿಗಳ ಮನೆ ಇರುತ್ತದೆ. ದಾವಾ ನಿವೇಶನವನ್ನು ಖರೀಧಿಸುವ ಪೂರ್ವದಲ್ಲಿ ಅಳತೆ ಮಾಡಿ ಖರೀಧಿಸಿರುತ್ತೇವೆ. 2020 ರಲ್ಲಿ ದಾವಾ ನಿವೇಶನವನ್ನು ಖರೀಧಿಸಿರುತ್ತೇವೆ.

ಪ್ರತಿವಾದಿಗಳ ನಿವೇಶನ ಸಂಖ್ಯೆ 126 ಎಂದರೆ ಸರಿ. ಸದರಿ ನಿವೇಶನದ ಅಳತೆ ಸಹಾ ಪೂರ್ವ-ಪಶ್ಚಿಮ 30 ಅಡಿ , ಉತ್ತರ ದಕ್ಷಿಣ 40 ಅಡಿ ಎಂದರೆ ಸರಿ. ಸದರಿ ನಿವೇಶನದ ಪೂರ್ವಕ್ಕೆ 127 ನಿವೇಶನ, ಪಶ್ಚಿಮಕ್ಕೆ ಖಾಸಗಿ ಸ್ವತ್ತು , ಉತ್ತರಕ್ಕೆ ನಮ್ಮ ನಿವೇಶನ 126, ದಕ್ಷಿಣಕ್ಕೆ ರಸ್ತೆ ಇರುತ್ತದೆ. ಪ್ರತಿವಾದಿಗಳು ಅವರ ನಿವೇಶನವನ್ನು ದಿನಾಂಕ 10-11-2017 ರ ಕ್ರಯಪತ್ರದ ಮುಖಾಂತರ ಚಂದ್ರರವರಿಂದ ಖರೀಧಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಚಂದ್ರ ರವರು 29-04-2013 ರಲ್ಲಿ ಕ್ರಯಪತ್ರದ ಮುಖಾಂತರ ಸದರಿ ನಿವೇಶನವನ್ನು ಮುನಿಯಪ್ಪ ಅವರ ಮಗ ಆನಂದ್ ರವರಿಂದ ಖರೀಧಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನಿಯಪ್ಪ ರವರಿಗೆ ತಹಶೀಲ್ದಾರ್ ರವರಿಂದ ಪ್ರತಿವಾದಪತ್ರದ ಸ್ವತ್ತು ಮಂಜೂರಾಗಿದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಬಂಗಾರಪೇಟೆ**